(11)

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು ಇವರ ನಿಯಮ 330 ರಡಿ ಗಮನ ಸೆಳೆಯುವ ಸೂಚನೆಗೆ ಮಾಹಿತಿ.**

**ವಿಷಯ:**

ರಾಜ್ಯದಲ್ಲಿ ಬಿತ್ತನೆ ಬೀಜಗಳ ದರ ಗಣನೀಯವಾಗಿ ಏರಿಕೆ ಮಾಡಿರುವುದರಿಂದ, ಮಳೆ ಕೊರತೆ, ಅಸಮರ್ಪಕ ಬೆಳೆ ಪರಿಹಾರ ಸೇರಿದಂತೆ ನಾನಾ ಕಾರಣಗಳಿಂದ ಈಗಾಗಲೇ ಬಸವಳಿದಿರುವ ರೈತಾಪಿ ವರ್ಗಕ್ಕೆ ಮತ್ತೊಂದು ಬರೆ ಎಳೆದಂತಿದೆ. ಬಿತ್ತನೆ ಬೀಜಗಳ ದರ ಗಣನೀಯವಾಗಿ ಏರಿಕೆ ಆಗಿದ್ದು, ಈ ಅನಿರೀಕ್ಷಿತ ಕ್ರಮದಿಂದ ಮುಂಗಾರು ಬಿತ್ತನೆಗೆ ಸಹ ಪೆಟ್ಟು ಬೀಳುವ ಎಲ್ಲಾ ಸಾಧ್ಯತೆ ಇದೆ.

ಬಿತ್ತನೆ ಬೀಜ ಖರೀದಿಗೆ ರೈತ ಸಂಪರ್ಕ ಕೇಂದ್ರಕ್ಕೆ ದೌಡಾಯಿಸುತ್ತಿರುವ ರೈತರು ಬದಲಾದ ದರ ಕೇಳಿ ಕಂಗಾಲಾಗಿದ್ದಾರೆ. ವಾಸ್ತವ ಅರಿಯದೆ ಬಿತ್ತನೆ ಬೀಜದ ಬೆಲೆ ಏರಿಕೆ ಮಾಡಿದ್ದರಿಂದ, ಬೀಜ ಖರೀದಿಗೂ ರೈತರು ಸಾಲ ಮಾಡಲೇಬೇಕಾದ ಸಂಕಷ್ಟದ ಪರಿಸ್ಥಿತಿಗೆ ಸಿಲುಕಿರುವ ಗಂಭೀರ ಸಮಸ್ಯೆ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಉತ್ತರ:**

ಬಿತ್ತನೆ ಬೀಜಗಳ ಮಾರಾಟ ದರಗಳನ್ನು ನಿಗದಿಪಡಿಸುವ ಸಂದರ್ಭಗಳಲ್ಲಿ, ಬಿತ್ತನೆ ಬೀಜ ಖರೀದಿ ದರಗಳು ಹಾಗೂ ಗರಿಷ್ಠ APMC ಮಾರಾಟ ದರಗಳನ್ನು ಆಧಾರವಾಗಿ ಪರಿಗಣಿಸಲಾಗುತ್ತದೆ. 2022-23 ನೇ ಸಾಲಿಗೆ ಹೋಲಿಸಿದಾಗ, 2023-24 ನೇ ಸಾಲಿನಲ್ಲಿ ವಿವಿಧ ಬೆಳೆಗಳ ಖರೀದಿ ದರಗಳಲ್ಲಿ ( procurement rates ) ಗರಿಷ್ಠ ಶೇ.59.58 ರಷ್ಟು ವ್ಯತ್ಯಾಸ ಕಂಡುಬಂದಿರುತ್ತದೆ. ಬೀಜೋತ್ಪಾದನೆಯನ್ನು ರೈತರ ಜಮೀನಿನಲ್ಲಿಯೇ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ರಾಷ್ಟ್ರೀಯ ಬೀಜ ನಿಗಮ ನಿಯಮಿತ, ಕರ್ನಾಟಕ ಎಣ್ಣೆಬೀಜ ಬೆಳೆಗಾರರ ಮಹಾ ಮಂಡಳಿ ಹಾಗೂ ಖಾಸಗಿ ಸಂಸ್ಥೆಗಳು ಕೈಗೊಂಡು ಸರಬರಾಜು ಮಾಡುವುದರಿಂದ ಖರೀದಿ ದರ ಹೆಚ್ಚಳ ಮೊತ್ತವು ಬೀಜೋತ್ಪಾದನೆ ಕೈಗೊಳ್ಳುವ ರೈತರಿಗೆ ವರ್ಗಾವಣೆಯಾಗಿರುತ್ತದೆ.

2022-23 ನೇ ಸಾಲಿಗೆ ಹೋಲಿಸಿದಾಗ, 2023-24 ನೇ ಸಾಲಿನಲ್ಲಿ ವಿವಿಧ ಬೆಳೆಗಳ APMC ಮಾರಾಟ ದರಗಳಲ್ಲಿ ಗರಿಷ್ಠ ಶೇ.51.62 ರಷ್ಟು ವ್ಯತ್ಯಾಸ ಕಂಡುಬಂದಿರುತ್ತದೆ. ಅಂತೆಯೇ, 2023-24ನೇ ಸಾಲಿನಲ್ಲಿ ವಿವಿಧ ಬೆಳೆಗಳ ಮಾರಾಟ ದರಗಳು ಸಹ 2022-23ನೇ ಸಾಲಿಗೆ ಹೋಲಿಸಿದಾಗ ಏರಿಕೆಯಾಗಿರುತ್ತವೆ.

2023-24 ನೇ ಸಾಲಿನಲ್ಲಿ ಬರಗಾಲದಿಂದ ಬೀಜೋತ್ಪಾದನೆಯು ಗಣನೀಯವಾಗಿ ಕುಂಠಿತವಾಗಿದ್ದು, ಬೀಜೋತ್ಪಾದಕರಿಂದ ಬಿತ್ತನೆ ಬೀಜಗಳನ್ನು ಪಡೆಯಲು ಖರೀದಿ ದರಗಳು ಸಹ ಗಣನೀಯವಾಗಿ ಏರಿಕೆಯಾಗಿರುತ್ತದೆ. ಒಂದು ವೇಳೆ ಬೀಜಗಳ ಖರೀದಿ ದರಗಳನ್ನು ಕಡಿತಗೊಳಿಸಿದ್ದಲ್ಲಿ ರೈತರು ಬಿತ್ತನೆ ಬೀಜಗಳನ್ನು ಬೀಜ ಸರಬರಾಜು ಸಂಸ್ಥೆಗಳಿಗೆ ನೀಡದೆ ಹೆಚ್ಚಿನ ದರಗಳಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಸಾಧ್ಯತೆಯಿತ್ತು. ಇದರಿಂದ ಬೀಜ ಸರಬರಾಜು ಸಂಸ್ಥೆಗಳು ಇಲಾಖೆಗೆ ಬೀಜ ಸರಬರಾಜು ಮಾಡಲು ಕಷ್ಟಸಾಧ್ಯವಾಗುತ್ತಿತ್ತು.

ಈ ಹಿನ್ನೆಲೆಯಲ್ಲಿ ಹೆಸರು ಬೆಳೆಯ ದರವು ಶೇ.48.5, ಉದ್ದು ಬೆಳೆಯ ದರವು ಶೇ.37.72 ರಷ್ಟು, ತೊಗರಿ ಬೆಳೆಯ ವಿವಿಧ ತಳಿಗಳ ದರವು ಶೇ.28.29 ರಿಂದ 37.69 ರಷ್ಟು ಮತ್ತು ಜೋಳದ ಬೆಳೆಯ ದರವು ಶೇ.7.66 ರಿಂದ 33.33 ರಷ್ಟು ಹೆಚ್ಚಾಗಿರುತ್ತದೆ. 2024 ರ ಮುಂಗಾರು ಹಂಗಾಮಿನ ಬಿತ್ತನೆ ಬೀಜಗಳ ವಿತರಣಾ ಕಾರ್ಯಕ್ರಮದಲ್ಲಿ ಸೋಯಾಅವರೆ ಬಿತ್ತನೆ ಬೀಜ ದರಗಳು 2023 ರ ಮುಂಗಾರು ಹಂಗಾಮಿನ ದರಗಳಿಗೆ ಹೋಲಿಸಿದಾಗ ಶೇ.8 ರಷ್ಟು ಕಡಿತಗೊಂಡಿರುತ್ತದೆ ಹಾಗೂ ಸೂರ್ಯಕಾಂತಿ ಬಿತ್ತನೆ ಬೀಜ ದರಗಳು ಕಳೆದ ಸಾಲಿನಷ್ಟೆ ಇದ್ದು, ಯಾವುದೇ ಬದಲಾವಣೆ ಇರುವುದಿಲ್ಲ.

ಈ ಅಂಶಗಳನ್ನು ಪರಿಗಣಿಸಿದಾಗ ನಮ್ಮ ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ವಿವಿಧ ಬೆಳೆಗಳ ಬಿತ್ತನೆ ಬೀಜಗಳ ದರಗಳು ಗಣನೀಯವಾಗಿ ಕಡಿಮೆ ಇರುವುದು ಕಂಡುಬರುತ್ತದೆ.

ಮುಂದುವರೆದು, ಈಗಾಗಲೇ ದಿನಾಂಕ:11.07.2024 ರವರೆಗೆ 54.69 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ಸುಮಾರು 3.17 ಲಕ್ಷ ಕ್ವಿಂಟಾಲ್ ಗಳಷ್ಟು ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳ ಮುಖಾಂತರ ವಿತರಿಸಲಾಗಿದೆ ಹಾಗೂ ಸುಮಾರು 7.56 ಲಕ್ಷ ರೈತರು ಬಿತ್ತನೆ ಬೀಜಗಳನ್ನು ಪಡೆದಿರುತ್ತಾರೆ. ಕಳೆದ ಸಾಲಿನಲ್ಲಿ ಇದೇ ಸಮಯಕ್ಕೆ 26.82 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ

ಬಿತ್ತನೆಯಾಗಿದ್ದು, 2.29 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳು ವಿತರಣೆಯಾಗಿರುತ್ತದೆ. ಬೆಳೆವಾರು ವಿತರಣಾ ವಿವರ ಈ ಕೆಳಕಂಡಂತಿದೆ.

(ಪ್ರಮಾಣ: ಕ್ವಿಂಟಾಲ್‌ಗಳಲ್ಲಿ)

| ಕ್ರ.ಸಂ. | ಬೆಳೆ | 2024ರ ಬೀಜ ವಿತರಣೆ | 2023ರ ಮುಂಗಾರು ಹಂಗಾಮಿನ ವಿತರಣೆ | ಬೀಜ ವಿತರಣೆಯ ಹೆಚ್ಚಳ |
|---|---|---|---|---|
| 1 | ಹೈ.ಭತ್ತ | 350 | 236 | 114 |
| 2 | ಜೋಳ | 204 | 94 | 110 |
| 3 | ರಾಗಿ | 9324 | 4780 | 4544 |
| 4 | ಮೆಕ್ಕೆಜೋಳ | 44003 | 29512 | 14491 |
| 5 | ಸಜ್ಜೆ | 799 | 599 | 200 |
| 6 | ತೊಗರಿ | 29564 | 15045 | 14519 |
| 7 | ಉದ್ದು | 2171 | 634 | 1537 |
| 8 | ಹೆಸರು | 3766 | 3084 | 683 |
| 9 | ನೆಲಗಡಲೆ | 35605 | 19203 | 16402 |
| 10 | ಸೋಯಅವರೆ | 171714 | 133265 | 38450 |

ಪ್ರಸ್ತುತ ಸಾಲಿನಲ್ಲಿ ತೊಗರಿ 29,564 ಕ್ವಿಂಟಾಲ್ ವಿತರಣೆಯಾಗಿದ್ದು ಇದು ಕಳೆದ 5 ಸಾಲಿಗೆ ಹೋಲಿಸಿದಲ್ಲಿ ದಾಖಲೆಯ ವಿತರಣೆಯಾಗಿರುತ್ತದೆ ಹಾಗೂ ಯಾವುದೇ ಬಿತ್ತನೆ ಬೀಜದ ಕೊರತೆಯಾಗದಂತೆ ಸಕಾಲದಲ್ಲಿ ರೈತರಿಗೆ ಬೀಜ ಪೂರೈಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ.

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು

ಸಂಖ್ಯೆ: AGRI/140/ACT/2024